ದಿನಾಂಕಃ 02.08.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎಸ್.ಡಿ. ವಕೀಲರಿಂದ:**

ನಾನು ಜಮೀನು ಮಂಜೂರಾತಿ ಕೋರಿ ಸಲ್ಲಿಸಿದ ನಮೂನೆ 53 ಮತ್ತು 57 ರ ಅರ್ಜಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಪಾಲೀಹೌಸ್, ಗ್ರೀನ್ ಹೌಸ್, ಎರಡು ಪೋರ್ಷನ್ ನ ಮಂಗಳೂರು ಟೈಲ್ ಹೌಸ್, ಒಂದು ಟ್ರ್ಯಾಕ್ಟರ್ ಶೆಡ್ ಮತ್ತು ಒಂದು ಗಾರ್ಡನಿಂಗ್ ಹಾಲ್, ರೈಟರ್ ಕ್ವಾಟ್ರಸ್ ಮತ್ತು ಜನರೇಟರ್ ರೂಮ್ ಬಾಬ್ತು ಗ್ರಾಮಪಂಚಾಯಿತಿಯಿಂದ ದಾಖಲೆ ಪಡೆದಿದ್ದೇನೆ. ಆ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ದಾವ ಸ್ವತ್ತಿನ ಉತ್ತರ ದಿಕ್ಕಿಗೆ ಮೇಲೆ ಹೇಳಿದ ಕಟ್ಟಡಗಳು ಇವೆ. ಈ ಬಗ್ಗೆ ವಾದಪತ್ರದಲ್ಲಿ ತಿಳಿಸಿದ್ದೇನೆ. ನಿಪಿ-37 ರಲ್ಲಿ ಜಮೀನಿನ ಸ್ವಾಧೀನ ಯಾರ ಬಳಿ ಇದೆ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಸರ್ಕಾರದ್ದು ಎಂದು ನುಡಿಯುತ್ತಾರೆ. ನಿಪಿ-37 ರಿಂದ 45 ರ ಫೋಟೋಗಳನ್ನು ದಾವಾಗೆ ಉಪಯೋಗವಾಗುವಂತೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ಫೋಟೋಗಳ ಮೇಲೆ ದಿನಾಂಕ ಮತ್ತು ಸಮಯ ನಮೂದಿಲ್ಲ ಎಂದರೆ ಸಾಕ್ಷಿಯು ಸಿಡಿಯಲ್ಲಿ ಇದೆ ಎಂದು ನುಡಿಯುತ್ತಾರೆ. ನಿಪಿ-45 ರ ಫೋಟೋ ಮಾಕೋನಹಳ್ಳಿ ಗ್ರಾಮದ ಅಂಥೋರಿಯಂ ಪ್ಲಾಂಟ್ ಗೆ ಸಂಬಂಧಿಸಿದ್ದು. ಆ ಫೋಟೋದಲ್ಲಿ ಅಂಥೋರಿಯಂ ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಅದರ ಗೇಟು ಕಾಣುತ್ತಿದೆ ಎಂದು ನುಡಿಯುತ್ತಾರೆ.

ಅಂಥೋರಿಯಂ ಪ್ಲಾಂಟ್ ಮಾಡಿರುವ ಬಗ್ಗೆ ಕೃಷಿ ಇಲಾಖೆಯಿಂದ ದೃಢೀಕರಣ ಪತ್ರ ಪಡೆದುಕೊಂಡಿದ್ದೇನೆ. ಆ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಪ್ರತಿವಾದಿಗಳಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನಿಪಿ-22 ನ್ನು ಹೊರತುಪಡಿಸಿ ನಾನು ಸಲ್ಲಿಸಿರುವ ಉಳಿದ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-22 ರ ದಾವೆಯ ವಾದಪತ್ರದಲ್ಲಿ ತಿದ್ದುಪಡಿಯಾಗಿರುವ ಬಗ್ಗೆ ನನಗೆ ಮರೆತುಹೋಗಿದೆ. ನಿಪಿ-22 ರಲ್ಲಿ ಕಾಣಿಸಿರುವ ಚೆಕ್ಕುಬಂದಿ ಸರಿ ಇದೆ ಎಂದರೆ ಸಾಕ್ಷಿಯು ತಪ್ಪಾಗಿದೆ ಎಂದು ನುಡಿಯುತ್ತಾರೆ. ನಿಪಿ-22 ರಲ್ಲಿ ಕಾಣಿಸಿರುವ ಜಮೀನಿನ ಸ್ವಾಧೀನದಲ್ಲಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಸ.ನಂ.416/3 ರ ಜಮೀನಿನಲ್ಲಿ ಸ್ವಾಧೀನ ಇದ್ದಾರೆ ಎಂದು ನುಡಿಯುತ್ತಾರೆ. ನಿಪಿ-3 ಒಂದನೇ ಪ್ರತಿವಾದಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ನಿಪಿ-1 ರಲ್ಲಿ ನನ್ನ ಹೆಸರು ಇಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ಋಣಗಳ ಬಾಬ್ತು ಏನೂ ಬರೆದಿಲ್ಲ ಎಂದರೆ ಸರಿ. ನಾನು ದಾವಾ ಜಮೀನಿನಲ್ಲಿ ಅಂಥೋರಿಯಂ ಪ್ಲಾಂಟ್ ಮಾಡಿಕೊಂಡಿದ್ದೇನೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ದಾವಾ ಜಮೀನಿನ ಮೇಲೆ ನಾನು ಸಿಂಡಿಕೇಟ್ ಬ್ಯಾಂಕ್ ನಲ್ಲಿ ಸಾಲ ಮಾಡಿಕೊಂಡಿರುವ ವಿಚಾರ ಹಾಗೂ ದಾವ ಸ್ವತ್ತಿನ ಬಗ್ಗೆ ದೂರದರ್ಶನದಲ್ಲಿ ಪ್ರಸಾರವಾಗಿದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ

ಸರಿಯಲ್ಲ. ದಿ.10.06.1985 ರಂದು ಜುಬಾನಿ ಹಿಸ್ಸೆ ಮತ್ತು ಪಾಲುಪಟ್ಟಿಯಾಗಿದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ದಿ.10.06.1985 ರಲ್ಲಿ ಆಗಿದೆ ಎಂದು ಹೇಳಲಾದ ಪಾಲುಪಟ್ಟಿಯಲ್ಲಿ ಸ.ನಂ.306 ನನ್ನ ಸ್ವಾಧೀನಕ್ಕೆ ಬಂದಿದೆ ಎಂದು ನಮೂದು ಇದೆ. ಆನಂತರ ಜುಬಾನಿ ಹಿಸ್ಸೆ ಮಾಡಿ ನೋಂದಾವಣಿ ಮಾಡಿಸಿಕೊಂಡಿರುತ್ತೇವೆ ಎಂದು ಹೇಳಿಕೊಂಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳು ಅಂಥೋರಿಯಂ ಪ್ಲಾಂಟ್ ಗೆ ಬಂದು ಕೆಲಸಗಾರರಿಗೆ ತೊಂದರೆ ಕೊಟ್ಟಿದ್ದಾರೆ ಎಂದು ಹೇಳಿದ ಬಾಬ್ತು ನಾನು ಫೋಲಿಸರಿಗೆ ದೂರು ಕೊಟ್ಟಿದ್ದೆ. ಆ ದಿನ ನಾನು ಅಲ್ಲಿಯೇ ಇದ್ದೆ. ಆ ದೂರಿನನ್ವಯ ಪೋಲಿಸರು ಸಿವಿಲ್ ಸ್ವರೂಪ ಎಂದು ಹಿಂಬರಹ ಕೊಟ್ಟಿದ್ದಾರೆ. ಆ ಹಿಂಬರಹವನ್ನು ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿ ಅಂಥೋರಿಯಂ ಪ್ಲಾಂಟ್ ನ ಸ್ವಾಧೀನದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2020-21 ನೇ ಇಸವಿಯಲ್ಲಿ ಪ್ರತಿವಾದಿಗಳು ಗನ್ ಹಿಡಿದು ಅಂಥೋರಿಯಂ ಪ್ಲಾಂಟ್ ಬಳಿ ಬಂದಿದ್ದರು. ಆ ಸಮಯಕ್ಕೆ ನಾನು ಅಂಥೋರಿಯಂ ಪ್ಲಾಂಟ್ ನಲ್ಲಿ ಇದ್ದೆ. ಗನ್ ಹಿಡಿದುಕೊಂಡು ಬಂದಿದ್ದರು ನಾನು ಪೋಲಿಸರಿಗೆ ದೂರು ಕೊಟ್ಟಿದ್ದೆ, ಆದರೆ ಅದನ್ನು ಪೋಲಿಸರು ಮುಚ್ಚಿಹಾಕಿದ್ದಾರೆ. ಈ ಸಂಬಂಧ ಮೇಲಾಧಿಕಾರಿಗಳಿಗೆ ದೂರು ಕೊಟ್ಟಿಲ್ಲ. ಪ್ರತಿವಾದಿಗಳು ಗನ್ ಹಿಡಿದುಕೊಂಡು ಬಂದಿದ್ದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಕೃಷ್ಣಪ್ಪ ಮತ್ತು ಬೇರೆ ಕೆಲಸದವರಿಗೆ ಪ್ರತಿವಾದಿಗಳು ಗನ್ ಹಿಡಿದು ಎದರಿಸಿದ್ದರು. ಪ್ರತಿವಾದಿಗಳ ಬಳಿ ಯಾವುದೇ ಗನ್ ಇಲ್ಲದೇ ಇದ್ದರೂ ಸಹಾ ನಾನೇ ಸುಳ್ಳು ಕಥೆ ಸೃಷಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳನ್ನು ಅಂಥೋರಿಯಂ ಪ್ಲಾಂಟ್ ನಿಂದ ಹೊರಗೆ ಹಾಕಲು ಕಾನೂನು ಬಾಹಿರ ಕೃತ್ಯಗಳನ್ನು ನಾನೇ ಆ ಸ್ಥಳದಲ್ಲಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸ.ನಂ.416/2 ರ ಫೋಡಿ ಹಾಗೂ ಸ.ನಂ.416/3 ರ ಒಂದು ಪೋರ್ಷನ್ ನ ರದ್ದಿಗಾಗಿ ಅರ್ಜಿ ಸಲ್ಲಿಸಿದ್ದೆ. ಆ ಅರ್ಜಿ ಇನ್ನೂ ಬಾಕಿ ಇದೆ. ಆ ಅರ್ಜಿಗಳು ನನ್ನ ವಿರುದ್ಧ ಆದೇಶವಾಗಿ ವಜಾ ಆಗಿದೆ ಎಂದರೆ ಸರಿಯಲ್ಲ. ಪೋಡಿ ರದ್ದತಿಗಾಗಿ ಅರ್ಜಿ ಕೊಟ್ಟ ನಂತರ ಪ್ರತಿವಾದಿಗಳು ತೊಂದರೆ ಕೊಟ್ಟರು ಎಂದು ಹೇಳಿಕೊಂಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಅ.ದಾ.ಸಂ.114/2019 ರಂತೆ 1 ನೇ ಪ್ರತಿವಾದಿ ನನ್ನ ವಿರುದ್ಧ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಆ ದಾವೆಯನ್ನು ಸ.ನಂ.416/3 ಕ್ಕೆ ಸಂಬಂಧಪಟ್ಟಂತೆ ಸಲ್ಲಿಸಲಾಗಿದೆ ಎಂದರೆ ಸರಿ. ಆ ದಾವೆಯನ್ನು ಸಲ್ಲಸಿದ ನಂತರವೂ ಸಹಾ ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.306 ರ ಪೂರ್ವ ದಿಕ್ಕಿಗೆ ಸ.ನಂ.416/4 ರ ಜಮೀನು ಇದೆ. ಸ.ನಂ.306 ರ ಪಶ್ಚಿಮ ದಿಕ್ಕಿಗೆ ನಂದೀಶ್ ರವರ ಜಮೀನು ಇದ್ದು ಆ ಜಮೀನು ಸಹಾ ಸ.ನಂ.306 ರಲ್ಲಿಯೇ ಇದೆ. ಸ.ನಂ.306 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಹಾಗೂ ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ

ಕಾರಣ ಇಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.